**ಸಾಕ್ಷಿಯನ್ನು ದಿನಾಂಕ 21/10/2022 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು. ದಂ.ಪ್ರ.ಸಂ.ಕಲಂ. 311 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲಿನ ಆದೇಶದ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆ :**

**ಶ್ರೀ. ಎಮ್.ಪಿ. ವಕೀಲರಿಂದಃ**

ಬೆಂಗಳೂರಿನ ಸಹಕಾರ ಸಂಘಗಳ ಜಂಟಿ ನಿಬಂಧಕರು ದಾವಾ ಸಂಖ್ಯೆ.ಜೆ.ಆರ್.ಬಿ./29-ಸಿ/02/2020-21 ರಲ್ಲಿ ದಿನಾಂಕ 23/03/2021 ರಂದು ಮಾಡಿರುವ ಆದೇಶದ ಪ್ರಮಾಣಿತ ಪ್ರತಿ, ರಂಗನಾಥ ಅವರು ಆರೋಪಿಯ ವಿರುದ್ದ ವಿಜಯ ನಗರ ಆರಕ್ಷಕ ಠಾಣೆಗೆ ಕೊಟ್ಟ ದೂರಿನ ಪ್ರಮಾಣಿತ ಪ್ರತಿ, ಅದರ ಮೇಲೆ ಸಲ್ಲಿಸಿದ ದೋಷಾರೋಪಣ ಪತ್ರದ ಪ್ರಮಾಣಿತ (ಎರಡು ಪುಟಗಳು) ಪ್ರತಿ, ಮಾನ್ಯ ಉಚ್ಚನ್ಯಾಯಾಲಯವು ಡಬ್ಲು.ಪಿ.ನಂ. 25115-25116/2017 (CS-RES) ರಲ್ಲಿ ದಿನಾಂಕ 21/09/2017 ರಂದು ಮಾಡಿರುವ ಆದೇಶದ ಪ್ರಮಾಣಿತ ಪ್ರತಿ, ನಾನು ಸಹಕಾರಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಕೊಟ್ಟ ದೂರಿನ ಸ್ವೀಕೃತಿ, ನಾನು ದಿಲೀಪ ಕುಮಾರ ವಕೀಲರ ಮೂಲಕ ಆರೋಪಿಗೆ ಕೊಟ್ಟ ನೋಟಿಸ್‌ನ ಕಛೇರಿ ಪ್ರತಿ, ಅಂಚೆ ರಶೀದಿ, ಬೆಂಗಳೂರಿನ ಸಹಕಾರ ಸಂಘಗಳ ಜಂಟಿ ನಿಬಂಧಕರು ದಿನಾಂಕ 16/04/2021 ರಂದು ಪ್ರಕರಣ ಸಂಖ್ಯೆ. ಜೆ.ಆರ್.ಬಿ.-64/20/2019-20 ರಲ್ಲಿ ಮಾಡಿರುವ ಆದೇಶದ ಪ್ರಮಾಣಿತ ಪ್ರತಿ ಹಾಜರುಪಡಿಸಿದ್ದೇನೆ. ಅವುಗಳನ್ನು ನಿಪಿ-53 ರಿಂದ 60 ಎಂದು ಗುರುತಿಸಲಾಯಿತು. ಆರೋಪಿ ನನ್ನ ಮೇಲೆ ಬೆಂಗಳೂರಿನ 9 ನೇ ಎ.ಸಿ.ಎಮ್,ಎಮ್. ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಸಿ.ಸಿ. ನಂ. 12771-2021 ರಲ್ಲಿ ನನ್ನನ್ನು ಬಿಡುಗಡೆ ಮಾಡಲಾಗಿದೆ ಎಂದು ಆದೇಶದ ಪ್ರಮಾಣಿತ ಪ್ರತಿಯನ್ನು ಹಾಜರು ಪಡಿಸಿದ್ದೇನೆ. ಸದರಿ ದಾಖಲೆಯು ದಿನಾಂಕ 20/12/2021 ರಂದು ನ್ಯಾಯಾಲಯದಲ್ಲಿ ಸಲ್ಲಿಸಲ್ಪಟ್ಟಿದೆ, ಅದನ್ನು ನಿಪಿ-61 ಎಂದು ಗುರುತಿಸಾಯಿತು.

<u>ಪಾಟೀ ಸವಾಲು : ಆರೋಪಿ ಮತ್ತು ಅವರ ವಕೀಲರು ಗೈರು ಹಾಜರಾಗಿರುವುದರಿಂದ ಪಾಟೀ ಸವಾಲಿಗೆ ಮುಂದೂಡಲಾಯಿತು.</u>

<u>(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)</u>

ಓ.ಹೇ.ಕೇ.ಸ.ಇದೆ

3 ನೇ ಎ.ಸಿ.ಎಮ್.ಎಮ್.ನ್ಯಾ.

ಬೆಂಗಳೂರು.

**<u>ಸಾಕ್ಷಿಯನ್ನು ದಿನಾಂಕ 20/02/2023 ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.</u>**

**<u>ಪಾಟೀ ಸವಾಲು : ಆರೋಪಿ ಪರ ಶ್ರೀ. ಆರ್.ಎಮ್.ಡಿ.ಆರ್. ವಕೀಲರಿಂದಃ</u>**

ನಾನು ಆರೋಪಿಗಳ ವಿರುದ್ದ 25865/2010 ರಂತೆ ಸಲ್ಲಿಸಿದ್ದೆ ಎಂದರೆ ಸರಿ. ಆದರೆ ಅದು ಮಾನಹಾನಿ ಪ್ರಕರಣ. ಆ ಪ್ರಕರಣದಲ್ಲಿ ಆರೋಪಿತರಿಗೆ ಬಿಡುಗಡೆ ಆಗಿದೆ ಎಂದರೆ ಸರಿ. ಅದರ ವಿರುದ್ದ ಮೇಲ್ಮನವಿ ಸಲ್ಲಿಸಿದ್ದೆ , ಅದು ಒಂದು ವಾರದ ಹಿಂದೆ ವಜಾ ಆಗಿದೆ, ಈಗ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಬೇಕೆಂದಿದ್ದೇನೆ. ನಾನು 25865/2010 ರಲ್ಲಿ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಸಹಕಾರ ಸಂಘಗಳ ನಿಭಂದಕರು ನಾನು ಈ ಸೊಸೈಟಿಯ ಸದಸ್ಯರು ಅಲ್ಲ ಎಂದು ಆದೇಶ ಮಾಡಿದ್ದಾರೆಂದು ಒಪ್ಪಿಕೊಂಡಿದ್ದೇನೆಂದರೆ ಸರಿ. ಸದರಿಯವರ ಆದೇಶವನ್ನು ನಾನು ರಿಟ್ ಅರ್ಜಿಯಲ್ಲಿ ಪ್ರಶ್ನಿಸಿರುವುದಾಗಿ, ನಿಭಂದಕರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದು ಸ್ವತಃ ಹೇಳಿದ್ದಾರೆ. ಈಗ ನನಗೆ ತೋರಿಸಿದ ದಾಖಲೆಯು ನಾನು ಉಪನಿಭಂದಕರ ಮುಂದೆ ಸಲ್ಲಿಸಿದ್ದ ದೂರಿನ ಮೇಲೆ ಆಗಿರುವ ಆದೇಶದ ಪ್ರಮಾಣಿತ ಪ್ರತಿ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯನ್ನು ಒಪ್ಪಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರು ಸದಸ್ಯರಿಗೆ ಮೋಸ ಮಾಡಿದ್ದಾರೆ ಎಂದು ನಾನು ದೂರು ಕೊಟ್ಟಿದ್ದೆ, ಆದರೆ ಆರೋಪಿತರು ಮತ್ತು ಜಂಟಿ ಉಪನಿಭಂದಕರು ಶಾಮೀಲಾಗಿ ವಿವಾದ ಮಾಡಿಕೊಂಡು ಈ ರೀತಿ ಆದೇಶ ಮಾಡಿದ್ದಾರೆ. ಇದರ ವಿರುದ್ದ ಕ್ರಮ ತೆಗೆದುಕೊಂಡಿರುವುದಾಗಿ ಸಾಕ್ಷಿ ಸ್ವತಃ ಹೇಳಿದ್ದಾರೆ. ನಿಡಿ-1 ದಾಖಲೆಯ 2 ನೇ ಪುಟದ 2 ನೇ ಖಂಡಿಕೆಯಲ್ಲಿ ನಾನು ದಯಾಳನ್ ಸಹಕಾರ ಸಂಘದ ಸದಸ್ಯನಲ್ಲ ಎಂದು ತೀರ್ಮಾನಿಸಲಾಗಿದೆ ಎಂದರೆ ಸರಿ. ಆದರೆ ಅವರು ಕೇಳಿದ ದಾಖಲೆಯನ್ನು ನಾನು ಈ ಪ್ರಕರಣದಲ್ಲಿ ಕೊಟ್ಟಿದ್ದೆ,

ಆದುದರಿಂದ ಆ ಪ್ರಕರಣದಲ್ಲಿ ದಾಖಲೆಯನ್ನು ಹಾಜರು ಪಡಿಸಿರಲಿಲ್ಲ, ಈ ವಿಷಯವನ್ನು ಅವರಿಗೆ ತಿಳಿಸಿದರೂ ಸಹ ಆ ರೀತಿ ಆದೇಶ ಮಾಡಿದ್ದಾರೆ.

ಈಗ ನನಗೆ ತೋರಿಸಿದ ದಾಖಲೆಯು ನಾನು ಕೊಟ್ಟ ದೂರಿನ ಮೇಲೆ ಮಾಡಿರುವ ಆದೇಶದ ಪ್ರಮಾಣಿತ ಪ್ರತಿ ಎಂದರೆ ಸರಿ. ಸದರಿ ದಾಖಲೆಯನ್ನು ಒಪ್ಪಿದ್ದರಿಂದ ನಿಡಿ-2 ಎಂದು ಗುರುತಿಸಲಾಯಿತು. ಸದರಿ ಆದೇಶದ ವಿರುದ್ದವೂ ಸಹ ನಾನು ಕ್ರಮ ತೆಗೆದುಕೊಂಡಿದ್ದೇನೆ.

ಈಗ ನನಗೆ ತೋರಿಸಿದ ದಾಖಲೆಯು ನಾನು ಕೊಟ್ಟ ದೂರಿನ ಮೇಲೆ ದಿನಾಂಕ 30/11/2009 ರಂದು ಮಾಡಿರುವ ಆದೇಶದ ಪ್ರಮಾಣಿತ ಪ್ರತಿ ಎಂದರೆ ಸರಿಯಲ್ಲ. ಸದರಿ ಆದೇಶವನ್ನು ಸೃಷ್ಟಿಸಿದ್ದಾರೆ. ದಿನಾಂಕ 31/01/2008 ಮತ್ತು 15/02/2008 ಮತ್ತು 25/06/2009 ರಂದು ನೀವು ಸಹಕಾರ ಸಂಘಗಳ ಅಪರ ನಿಭಂದಕರಿಗೆ ದೂರು ಕೊಟ್ಟಿರುವಿರಾ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ಸುಮಾರು ದೂರುಗಳನ್ನು ಕೊಟ್ಟಿದ್ದೇನೆ, ಆದರೆ ದಿನಾಂಕಗಳು ನೆನಪಿಲ್ಲ ಎಂದು ಉತ್ತರಿಸಿದ್ದಾರೆ. ದಿನಾಂಕ 30/11/2009 ರಂದು ನಾನು ಕೊಟ್ಟ ದೂರಿಗೆ ನಿಭಂದಕರು ನಾನು ಸಂಘದ ಸದಸ್ಯನಲ್ಲವೆಂದು ಆದೇಶ ಮಾಡಿದ್ದಾರೆ, ಅದರೂ ಸಹ ನಾನು ದಿನಾಂಕ ನೆನಪಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-11 ಮೂಲ ದಾಖಲೆ ಸಿಕ್ಕಿದೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ನಿಪಿ-11 ರ ಮೂಲ ದಾಖಲೆಯನ್ನು 2 ನೇ ಆರೋಪಿಯು ಸಭೆ ಇದೆ ಎಂದು ಬರುವಂತೆ ಹೇಳಿದ್ದರು, ದಾಖಲೆಯನ್ನು ಕೊಡುವಂತೆ ಹೇಳಿದ್ದರು, ಸ್ವಲ್ಪ ದಾಖಲೆಗಳನ್ನು ತಮ್ಮಲ್ಲಿಯೇ ಇಟ್ಟುಕೊಂಡು ಉಳಿದವುಗಳನ್ನು ವಾಪಾಸು ಕೊಟ್ಟಿದ್ದರು, ಅವುಗಳಲ್ಲಿ ನಿಪಿ-11 ರ ಮೂಲ ದಾಖಲೆ 2 ನೇ ಆರೋಪಿಯ ಬಳಿ ಇದೆ. ನಿಪಿ-11 ರ ಮೂಲ ದಾಖಲೆ 2 ನೇ ಆರೋಪಿಯ ಬಳಿ ಇದೆ ಸುಮಾರು ದೂರುಗಳನ್ನು ಕೊಟ್ಟಿದ್ದೇನೆ. ನನ್ನ ಹತ್ತಿರ ನಿಪಿ-11 ಇಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಆರೋಪಿಯ ಬಳಿ ಇದೆ.

ಈಗ ನನಗೆ ತೋರಿಸಿದ ನಿಪಿ-53 ಆದೇಶವು ನನ್ನ ದೂರಿನ ಮೇಲೆ ಮಾಡಿಲ್ಲವೆಂದರೆ ಸರಿಯಲ್ಲ. ನನ್ನ ಮತ್ತು ಉಳಿದ ಸದಸ್ಯರ ದೂರಿನ ಮೇರೆಗೆ ಆಗಿದೆ. ಈಗ ನನಗೆ ತೋರಿಸಿದ ನಿಪಿ-53 ಆದೇಶವು ನನ್ನ ದೂರಿನ ಮೇಲೆ ಮಾಡಿಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆದೇಶವನ್ನು ಮರಿಯಪ್ಪ ಅವರ ದೂರಿನ ಮೇರೆಗೆ ಮಾಡಲಾಗಿದೆ ಎಂದರೆ ಸದಸ್ಯರಿಗೆ ಅನ್ಯಾಯ ಮತ್ತು ಮೋಸ ಆಗಿದೆ ಎಂದು ಮರಿಯಪ್ಪನವರು ಅರ್ಜಿ ಕೊಟ್ಟಿದ್ದರು, ನಾನು ಸಹ ಒಬ್ಬ ಸದಸ್ಯ. ನಾನು ಸದಸ್ಯನಲ್ಲದಿದ್ದರೂ ಸಹ ಸದಸ್ಯನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ನಿಪಿ-54 ದಾಖಲೆಗೂ ನನಗೂ ಸಂಬಂಧವಿಲ್ಲ, ಅದು ರಂಗನಾಥ ಅವರು ಕೊಟ್ಟ ದೂರಿನ ಪ್ರತಿ ಎಂದರೆ ನನಗೂ ಸಂಬಂಧವಿದೆ. ನಿಪಿ-54 ದಾಖಲೆಯು ನನಗೆ ಯಾವುದೇ ರೀತಿಯಿಂದ ಸಂಬಂಧವಿಲ್ಲದಿದ್ದರೂ ಸಹ ಸಂಬಂಧವಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-55 ದೋಷಾರೋಪಣ ಪತ್ರದಲ್ಲಿ ನಾನು ಸಾಕ್ಷಿ ಅಲ್ಲವೆಂದರೆ ಸರಿ. ನಿಪಿ-56 ರಿಟ್ ಅರ್ಜಿ ಸಂಖ್ಯೆ. 25115-25116-2017 ರಲ್ಲಿ ನಾನು ಸಂಬಂಧಪಟ್ಟ ಪ್ರಾಧಿಕಾರವನ್ನು ಸಂಪರ್ಕಿಸಲು ಆದೇಶ ಮಾಡಲಾಗಿದೆ ಎಂದರೆ ಸರಿ. ನಿಪಿ-57 ದೂರನ್ನು ನಿಪಿ-56 ರ ಆದೇಶವಾದ ಮೇಲೆ ಕೊಟ್ಟಿದ್ದೇನೆ ಎಂದರೆ ಸರಿ. ನಿಪಿ-58 ಮತ್ತು 59 ದಾಖಲೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-60 ಆದೇಶದಲ್ಲಿ ನಾನು ಪಕ್ಷಗಾರನಲ್ಲ, ಸದರಿ ದಾಖಲೆಗೂ ಮತ್ತು ನನಗೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿಪಿ-61 ರಲ್ಲಿ ನಮೂದಿಸಿರುವ ಸಿ.ಸಿ. 12771/2021 ಪ್ರಕರಣವು ಬೇರೆ ಆರೋಪಿಗಳ ಮೇಲೆ ಈಗಲೂ ವಿಚಾರಣೆಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-61 ರ ಆದೇಶದ ವಿರುದ್ದ ಆರೋಪಿತರು ಮಾನ್ಯ ಸತ್ರ ನ್ಯಾಯಾಲಯದಲ್ಲಿ ಕ್ರಿಮಿನಲ್ ರಿ.ಪಿ. ನಂ. 87/2023 ರಂತೆ ಸಲ್ಲಿಸಿದ್ದಾರೆ ಎಂದರೆ ಸರಿ. ಒಂದು ವರ್ಷ ತಡವಾಗಿ ವಿಳಂಬ ಮಾಡಲು

ಹಾಕಿದ್ದಾರೆ. ಸಾಕ್ಷಿಯ ಸದರಿ ದಾಖಲೆಯನ್ನು ಒಪ್ಪಿದ್ದರಿಂದ ಕ್ರಿಮಿನಲ್ ರಿ.ಪಿ. ನಂ. 87/2023 ದ ಆದೇಶದ ಪುಟದ ಪ್ರತಿಯನ್ನು ನಿಡಿ-3 ಎಂದು, ಅರ್ಜಿಯ ಪ್ರಮಾಣಿತ ಪ್ರತಿಯನ್ನು ನಿಡಿ-4 ಎಂದು, ಮಧ್ಯಂತರ ಅರ್ಜಿಯ ಪ್ರಮಾಣಿತ ಪ್ರತಿಯನ್ನು ನಿಡಿ-5 ಎಂದು ಗುರುತಿಸಲಾಯಿತು. ಸದರಿ ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಸುಳ್ಳು ಕಾರಣಗಳನ್ನು ಹೇಳಿದ್ದಾರೆ, ವಿಳಂಬವಾಗಬಾರದೆಂದು ನಾವು ತಕರಾರು ಇಲ್ಲವೆಂದು ಹೇಳಿದ್ದೇವೆ. ನಿಪಿ-53 ರಿಂದ 60 ದಾಖಲೆಗಳು 2021 ಮತ್ತು 2022 ರಲ್ಲಿ ಆದ ಆದೇಶಗಳ ಪ್ರತಿಗಳು ಎಂದರೆ ಸರಿ. ಆದರೆ ಅದರಲ್ಲಿಯ ವಿಷಯಗಳು 1987 ರಿಂದ ಮೋಸ ಮಾಡಿದ್ದಾರೆ ಎಂದು ಇವೆ. ಈ ಪ್ರಕರಣಕ್ಕೂ ಮತ್ತು ನಿಪಿ-53 ರಿಂದ 60 ದಾಖಲೆಗಳಿಗೂ ಯಾವುದೇ ರೀತಿಯಿಂದ ಸಂಬಂಧವಿಲ್ಲದಿದ್ದರೂ ಸಹ ಆರೋಪಿಗಳಿಗೆ ತೊಂದರೆ ಕೊಡಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**